3. ಸ್ಥಿರ ದೂರವಾಣಿ ಹೊಂದಿರುವವರು. (ಮೊಬೈಲ್ ದೂರವಾಣಿ ಹೊಂದಿರುವವರು ಅನರ್ಹರು).
4. ಸ್ವಂತವಾಗಿ ಡೀಸೆಲ್/ಪೆಟ್ರೋಲ್ ಇಂಧನ ಬಳಸುವ ವಾಹನ ಹೊಂದಿರುವವರು. (ಲೂನಾ/ ಟಿ.ವಿ.ಎಸ್. ಹೊಂದಿರುವವರು ಅನರ್ಹರು)
5. ಬ್ಯಾಂಕ್/ಸಹಕಾರಿ ಸಂಘಗಳಲ್ಲಿ ರೂ.1.00 ಲಕ್ಷಕ್ಕೂ ಮೇಲ್ಪಟ್ಟು ಸಾಲ ಪಡೆದಿರುವವರು.
6. ಒಂದು ಅಥವಾ ಅದಕ್ಕಿಂತ ಹೆಚ್ಚಿನ ಬೋರ್‌ವೆಲ್ ಹೊಂದಿರುವವರು.
7. ತಿಂಗಳಿಗೆ ರೂ.1,000/–ಗಿಂತ ಹೆಚ್ಚಿಗೆ ವೇತನ ಪಡೆಯುವ ಸರ್ಕಾರಿ/ಸರ್ಕಾರೇತರ/ಖಾಸಗಿ ಸಿಬ್ಬಂದಿಗಳು.
8. ಆದಾಯ ತೆರಿಗೆ ಪಾವತಿಸುವವರು.
9. ನೋದಾಯಿತ ಗುತ್ತಿಗೆದಾರರು APMC ಟ್ರೇಡರ್ಸ್/ ಬೀಜ/ ರಸಗೊಬ್ಬರ ಇತ್ಯಾದಿ ಮಾರಾಟಗಾರರು.
10. ಒಟ್ಟಾರೆ ಸಮೀಕ್ಷೆ ಮಾಡುವ ಸಂದರ್ಭದಲ್ಲಿ ಕುಟುಂಬದ ಜೀವನ ಮಟ್ಟವನ್ನು ಕೂಡ ಸಮೀಕ್ಷೆ ಮಾಡಿ ನಿರ್ಣಯಿಸುವುದು.

ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರ ನಕ್ಸಲ್ ಪೀಡಿತ ಪ್ರದೇಶ ಮತ್ತು ಮಲೆನಾಡು ಪ್ರದೇಶವಾದ್ದರಿಂದ ಸರ್ಕಾರಿ ಹೆಚ್ಚು ಒತ್ತು ನೀಡುವುದು

717 (16) ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) : ಮಾನ್ಯ ಸಮಾಜ ಕಲ್ಯಾಣ ಮತ್ತು ಬಂಧೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ತೀರ್ಥಹಳ್ಳಿ ಕ್ಷೇತ್ರದಲ್ಲಿ ನಕ್ಸಲ್ ಸಮಸ್ಯೆ ಮತ್ತು ಭಾರಿ ಮಲೆನಾಡು ಪ್ರದೇಶವಾದ್ದರಿಂದ ಸರಕಾರ ಹೆಚ್ಚುವರಿ ಮಹಿಳಾ ವಸತಿ ನಿಲಯ ತೆರೆಯುವ ಪ್ರಸ್ತಾವನೆ ಸರ್ಕಾರಕ್ಕೆ ಇದೆಯೇ;

ಆ) ಹೆಚ್ಚುವರಿ ಮಹಿಳಾ ವಸತಿ ನಿಲಯ ತೆರೆಯದಿದ್ದರೆ, ಮಳೆ, ನಕ್ಸಲ್ ಮತ್ತು ಬಡತನ ಸಮಸ್ಯೆಗಳು ಈ ಭಾಗದ ಬಡ ಜನರ ಭವಿಷ್ಯಕ್ಕೆ ಮಾರಕವಾಗುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂಧೀಖಾನೆ ಸಚಿವರು) :

ಅ) ಇಲ್ಲ

ಆ) ಇಲ್ಲ

ಅಕ್ರಮ ಕೃಷಿ ಪಂಪ್‌ಸೆಟ್ಟುಗಳನ್ನು ಸಕ್ರಮಗೊಳಿಸುವುದು

755 (240) ಶ್ರೀ ಸುರೇಶ್ ಗೌಡ (ನಾಗಮಂಗಲ) : ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಅಕ್ರಮ ಕೃಷಿ ಪಂಪ್‌ಸೆಟ್ಟುಗಳನ್ನು ಸಕ್ರಮಗೊಳಿಸುವ ಯೋಜನೆ ಜಾರಿಯಲ್ಲಿದೆಯೇ;

ಆ) ರಾಜ್ಯದಲ್ಲಿ ಎಷ್ಟು ಅಕ್ರಮ ಕೃಷಿ ಪಂಪ್‌ಸೆಟ್ಟುಗಳು ಇರುವುದಾಗಿ ಅಂದಾಜಿಸಲಾಗಿದೆ;

ಇ) ಅಕ್ರಮ ಪಂಪ್‌ಸೆಟ್ಟುಗಳನ್ನು ಸಕ್ರಮಗೊಳಿಸಲು ಇಲ್ಲಿಯತನಕ ಎಷ್ಟು ಅರ್ಜಿಗಳು ಬಂದಿರುತ್ತದೆ; ಎಷ್ಟು ಅರ್ಜಿಗಳನ್ನು ಪುರಸ್ಕರಿಸಲಾಗಿದೆ; ಈ ಯೋಜನೆಯ ರೂಪುರೇಷೆಗಳೇನು; ಸರ್ಕಾರಕ್ಕೆ ಇದರಿಂದ ತಗಲುವ ವೆಚ್ಚವೆಷ್ಟು?

ಕುಮಾರಿ ಶೋಭಾ ಕರಂದ್ಲಾಜೆ (ಇಂಧನ ಸಚಿವರು) :

ಅ) ಹೌದು. ಪ್ರಸ್ತುತ ರಾಜ್ಯದಲ್ಲಿ ಅನಧಿಕೃತ ನೀರಾವರಿ ಪಂಪುಸೆಟ್ಟುಗಳನ್ನು ಸಕ್ರಮಗೊಳಿಸುವ ಯೋಜನೆಯು ಜಾರಿಯಲ್ಲಿದ್ದು, ದಿನಾಂಕ: 31–7–2012 ರವರೆಗೆ ಕಾಲಮಿತಿಯನ್ನು ವಿಸ್ತರಿಸಿ ಸಕ್ರಮೀಕರಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ.